International Journal of Kannada Research 2016; 2(1): 53-55

International Journal of Kannada Research
www.kannadajournal.com

**ISSN: 2454–5813**
IJKR 2016; 2(1): 53-55
© 2016 IJKR
www.kannadajournal.com
Received: 29-11-2015
Accepted: 30-12-2015

**ಉಮೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಗುಂಡ್ಲುಪೇಟೆ, ಚಾಮರಾಜನಗರ
ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಉಮೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಗುಂಡ್ಲುಪೇಟೆ, ಚಾಮರಾಜನಗರ
ಜಿಲ್ಲೆ, ಕರ್ನಾಟಕ, ಭಾರತ

# ಕನಕದಾಸರ ರಾಮಧಾನ್ಯ ಚರಿತ್ರೆ: ಸಮತೆ, ಸಮಾನತೆ ತಾತ್ವಿಕ ಮೌಲ್ಯಗಳ ಪ್ರತಿಪಾದನೆ

**ಉಮೇಶ**

**DOI:** https://www.doi.org/10.22271/24545813.2016.v2.i1a.1162

**ಪೀಠಿಕೆ**

ಕನ್ನಡದ ಸಂತ ಕವಿಗಳಲ್ಲಿ ಒಬ್ಬರಾಗಿರುವ ಕನಕದಾಸರ ಸಾಹಿತ್ಯ ಮತ್ತು ಜೀವನವು ಎಲ್ಲಾ ಕಾಲಕ್ಕೂ ಆದರಣೀಯವಾದದ್ದು. ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಈಗನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದ ಕನಕದಾಸರು ಕರ್ನಾಟಕದಲ್ಲಿ ೧೫ ರಿಂದ ೧೬ನೆಯ ಶತಮಾನದಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರಾಗಿದ್ದಾರೆ. ಭಕ್ತಿಪಂಥದ ದಾಸ ಪರಂಪರೆಯಲ್ಲಿ ಕಂಡು ಬರುವ ೨೫೦ ಕ್ಕೂ ಹೆಚ್ಚು ಹರಿದಾಸರಲ್ಲಿ ಕನಕದಾಸರೊಬ್ಬರೇ ಕೆಳಪಂಗಡದ ದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು. ತಮ್ಮ ಸಮಕಾಲೀನರಾದ ಪುರಂದರದಾಸರೊಂದಿಗೆ 'ಕರ್ನಾಟಕ ಸಂಗೀತ'ದ ಮೂಲಭೂತ ಸಿದ್ಧಾಂತಗಳಿಗೆ ಅಭೂತಪೂರ್ವ ಕಾಣಿಕೆ ನೀಡಿದವರು. ಆದುದರಿಂದಲೇ ಕನ್ನಡ ದಾಸಸಾಹಿತ್ಯದಲ್ಲಿ ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಕರೆಯಲಾಗಿದೆ. ಸೈನ್ಯದಲ್ಲಿ ದಂಡನಾಯಕರಾಗಿದ್ದ ಕನಕದಾಸರು ಯುದ್ಧವೊಂದರಲ್ಲಿ ಸೋತು ವೈರಾಗ್ಯವುಂಟಾಗಿ ಕಾಗಿನೆಲೆಯ ಆದಿಕೇಶವನ ಸೇವಕರಾದರು. ನಂತರ ಶ್ರೀವ್ಯಾಸರಾಯರನ್ನು ಗುರುಗಳನ್ನಾಗಿ ಸ್ವೀಕರಿಸಿ, ಆಧ್ಯಾತ್ಮದ ಕಡೆ ಮುಖ ಮಾಡಿದ ಇವರು ಸಮಾಜದಲ್ಲಿನ ಜಾತಿಪದ್ಧತಿಗಳನ್ನು ಅಲ್ಲಗಳೆದರು. ಮಾನವನು ಸಮಾಜದಲ್ಲಿ ನೆಮ್ಮದಿಯಿಂದ ಬದುಕಲು ಬೇಕಾದ ನೈತಿಕ ಮೌಲ್ಯಗಳಾದ ತಾತ್ವಿಕತೆ, ಮಾನವೀಯತೆ, ಆಧ್ಯಾತ್ಮಿಕ ಆದರ್ಶಗಳ ಮುಖಾಂತರ ಸಂದೇಶ ನೀಡಿದರು.

ಕನಕದಾಸರು ಕೀರ್ತನೆಗಳನ್ನಷ್ಟೇ ಅಲ್ಲದೇ ಕಾವ್ಯ, ಖಂಡಕಾವ್ಯ, ಮುಂಡಿಗೆಗಳನ್ನು ಬರೆದಿದ್ದಾರೆ. ಹೀಗಾಗಿ ಅವರು ಕಿರ್ತನೆಗಳ ದೃಷ್ಟಿಯಿಂದ ಕೀರ್ತನಕಾರರಾಗಿಯೂ, ಕಾವ್ಯಗಳ ದೃಷ್ಟಿಯಿಂದ ಕವಿಯೂ ಆಗಿದ್ದಾರೆ. 'ಮೋಹನ ತರಂಗಿಣಿ', 'ನಳಚರಿತ್ರೆ', 'ರಾಮಧಾನ್ಯ ಚರಿತ್ರೆ', 'ಹರಿಭಕ್ತಿ ಸಾರ', ಕೀರ್ತನೆ ಹಾಗೂ ಮಂಡಿಗೆಗಳು ಕನಕದಾಸರಿಂದ ರಚಿತವಾದ ಕೃತಿಗಳು. 'ಕಾಗಿನೆಲೆಯ ಆದಿಕೇಶವ' ಇವರ ಕೀರ್ತನೆಗಳ ಅಂಕಿತನಾಮ. ಹರಿಯ ಬಗೆಗಿನ ಭಕ್ತಿಯೇ ಅಲ್ಲದೆ ಕನಕದಾಸರ ಹಲವಾರು ಕೀರ್ತನೆಗಳಲ್ಲಿ ತಾತ್ವಿಕತೆ, ವೈಚಾರಿಕತೆ, ಸಾಮಾಜಿಕ ವಿಮರ್ಶೆ ಮತ್ತು ವಿಡಂಬನೆ ಕಂಡು ಬರುತ್ತದೆ. ಆ ಕಾಲಘಟ್ಟಕ್ಕೆ ಪ್ರಚಲಿತವಿದ್ದ ಹಲವು ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು, ಜಾತಿ–ವರ್ಗ ಭೇದಗಳನ್ನು ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಮಾರ್ಮಿಕವಾಗಿ ಖಂಡಿಸಿದ್ದಾರೆ. "ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂಬ ಮೊದಲಾದ ಕೀರ್ತನೆಗಳಲ್ಲಿ ಈ ಅಂಶಗಳು ಅನಾವರಣಗೊಂಡಿರುವುದು ನಾವು ಪರಾಮರ್ಶಿಸಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪೊನ್ನ, ನಾಗಚಂದ್ರ, ಲಕ್ಷ್ಮೀಶ ಕವಿಗಳ ಆದಿಯಾಗಿ ಆಧುನಿಕ ಸಾಹಿತ್ಯದ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದವರೆವಿಗೂ ರಾಮಕತೆಯ ಪ್ರವಾಹವು ನಿರಂತರವಾಗಿ ಪ್ರವಹಿಸಿರುವುದನ್ನು ನಾವು ಗಮನಿಸಬಹುದು. ಹಾಗೆಯೇ ಕನಕದಾಸರು ತಮ್ಮ ಕಾಲಘಟ್ಟದಲ್ಲಿದ್ದ ವರ್ಗ–ವರ್ಣ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನದ ಫಲವಾಗಿ ತಮ್ಮ ವಿಚಾರಧಾರೆಯನ್ನು ಮಂಡಿಸಲು ರಾಮಾಯಣದ ಕಥೆಯನ್ನೇ ಆರಿಸಿಕೊಂಡಿದ್ದಾರೆ. ಈ ಮುಖೇನ ಸಿದ್ಧಗೊಂಡ ಕೃತಿಯೇ 'ರಾಮಧಾನ್ಯಚರಿತ್ರೆ'. ಕನಕದಾಸರ ವೈಶಿಷ್ಟ್ಯಪೂರ್ಣವಾದ ಕೃತಿಗಳಲ್ಲಿ 'ರಾಮಧಾನ್ಯಚರಿತ್ರೆ' ಕೃತಿ ಪ್ರಮುಖವಾದುದಾಗಿದೆ. ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಖಂಡಕಾವ್ಯ ಸುಮಾರು ೧೫೮ ಪದ್ಯಗಳನ್ನು ಒಳಗೊಂಡಿದೆ.

ಭಾರತೀಯ ಸನಾತನ ಪರಂಪರೆಯಲ್ಲಿ ವರ್ಗ–ವರ್ಣ ಸಂಘರ್ಷವು ಬಹಳ ಪುರಾತನವಾದವುಗಳು. ಈ ಹಿನ್ನೆಲೆಯಲ್ಲಿ ಕನಕದಾಸರು ತಮ್ಮ ಜೀವನದಲ್ಲಿ ಅನುಭವಿಸಿದ ಕಹಿ ಘಟನೆಗಳನ್ನು, ಕಂಡುಂಡ ವರ್ಗ–ವರ್ಣ ಸಂಘರ್ಷಗಳ ಅನುಭವಗಳನ್ನು ಈ ಕೃತಿಯಲ್ಲಿ ದಾಖಲು ಮಾಡಿದ್ದಾರೆ. ರಾಮಧಾನ್ಯಚರಿತ್ರೆಯಲ್ಲಿ ನಾವು ಊಟ ಮಾಡುವ ಧಾನ್ಯಗಳನ್ನು ಪಾತ್ರವಾಗಿಸಿ ಅದಕ್ಕೆ ಜೀವತುಂಬಿ ಸಮಾಜದ ಅಸಮಾನತೆಯ ಚಿತ್ರಣ ನೀಡಿದವರು ಕನಕದಾಸರು. ಕೃತಿಯಲ್ಲಿ ಧಾನ್ಯಗಳನ್ನು ಮೂರ್ತಿಕರಿಸಿ ಕಥೆಯನ್ನು ರೂಪಾತ್ಮಕವಾಗಿ ಚಿತ್ರಿಸಿರುವ ಕನಕದಾಸರ ಕವಿ ಪ್ರತಿಭೆ ವಿಶೇಷವಾಗಿದೆ. ಈ ಕಥಾಹಂದರವು ಮೂಲ ರಾಮಾಯಣದಲ್ಲಿ ಇಲ್ಲದಿರುವುದು ಈ ಕಾವ್ಯದ ವೈಶಿಷ್ಟ್ಯವಾಗಿದ್ದು ಅದು ಕನಕದಾಸರ ಸ್ವತಂತ್ರ ಕಲ್ಪನೆ ಆಗಿದೆ. ಇಡೀ ರಾಮಾಯಣದ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ನಿರೂಪಿಸುವ ಈ ಕಾವ್ಯ ಪೌರಾಣಿಕ ವಿನ್ಯಾಸದಂತೆ ಭಾಸವಾದರೂ ಆಂತರ್ಯದಲ್ಲಿ ಒಂದು ಬಗೆಯ ವಿಡಂಬನೆ, ವ್ಯಂಗ್ಯವನ್ನು ಒಳಗೊಂಡಿದೆ.

"ರಾಮಧಾನ್ಯದ ಕೃತಿಯನೀಜನಂ  
ಸ್ತೋಮವೆಲ್ಲಾದರಿಸುವಂದದಿ  
ಭೂಮಿಗಚ್ಚರಿಯಾಗಿ ಪೇಳುವೇನೀ ಮಹಾಕಥೆಯ" (ಪದ್ಯ ೩)

ಎಂಬ ಪದ್ಯದ ಮೂಲಕ ಕಾವ್ಯವನ್ನು ಆರಂಭಿಸಿರುವ ಕನಕದಾಸರು ಈ ರಾಮಚರಿತ್ರೆಯೊಳಗೆ ನರೆದಲೆಗ (ರಾಗಿ) ಮತ್ತು ವ್ರೀಹಿ (ಭತ್ತ)ಯ ಕಥೆಯ ಮೂಲಕ ಸಮತೆ, ಸಮಾನತೆಯ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ.

ಶ್ರೀರಾಮಚಂದ್ರನು ಸೀತೆಯನ್ನು ಅಪಹರಿಸಿದ ರಾವಣಾದಿಯಾಗಿ ಎಲ್ಲರನ್ನು ಕೊಂದು ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ತನ್ನ ಪರಿವಾರದೊಂದಿಗೆ ಮಹರ್ಷಿಗಳ ಆಶ್ರಮಕ್ಕೆ ಆಗಮಿಸುತ್ತಾನೆ. ಆಗ ಋಷಿಗಳೆಲ್ಲರೂ ರಾವಣನನ್ನು ಕೊಂದು ಮುನಿವರ್ಯರಿಗೆ ಅವನಿಂದ ಆಗುತ್ತಿದ್ದ ಕಿರುಕುಳವನ್ನು ತಪ್ಪಿಸಿದರೆಂದು ಹೊಗಳಿ ರಾಮನನ್ನು ಉಪಚರಿಸಲು ವಿವಿಧ ಧಾನ್ಯಗಳಿಂದ ಬಗೆಬಗೆಯ ಭೋಜನವನ್ನು ಮಾಡಿಸುತ್ತಾರೆ. ಆಗ ಹನುಮಂತನು "ಭಕ್ಷ್ಯಗಳೇನೋ ರುಚಿಯಾಗಿವೆ. ಆದರೆ ಈ ಭಕ್ಷ್ಯಗಳನ್ನು ಯಾವ ಯಾವ ಧಾನ್ಯಗಳಿಂದ ತಯಾರಿಸಿದ್ದಾರೋ ಆ ಧಾನ್ಯಗಳನ್ನೆಲ್ಲ ಒಮ್ಮೆ ತಾನು ನೋಡಬೇಕು" ಎಂದನು. ಆಗ ಶ್ರೀರಾಮಚಂದ್ರನು ಗೌತಮ ಮಹರ್ಷಿಗಳಿಗೆ ಹೇಳಿ ಧಾನ್ಯಗಳನ್ನು ತರಿಸಿದನು. ನರೆದಲೆಗ, ರಾಗಿ, ನೆಲ್ಲು, ಹಾರಕ, ಬರಗು, ಕಂಬು, ಸಾಮೆ, ನವಣೆ ಎಂಬ ನವಧಾನ್ಯಗಳು ಬಂದವು. ಆಗ ರಾಮನು ಈ ನವಧಾನ್ಯಗಳಲ್ಲಿ ಯಾವುದು ಶ್ರೇಷ್ಠ ಎಂದು ಕೇಳಲು, ಒಬ್ಬರು ಗೋಧಿ ಎಂದು, ಇನ್ನೊಬ್ಬರು ಸಾಮೆ ಎಂದು ತರೇವಾರಿ ಉತ್ತರ ನೀಡಿದರು. ಅದಕ್ಕೆ ಶ್ರೀರಾಮಚಂದ್ರನು ಹಲವು ಹೆಸರುಗಳನ್ನು ಹೇಳದೆ ಒಂದನ್ನೆ ಹೇಳುವಂತೆ ಕೇಳಲಾಗಿ ಆಗ ಗೌತಮ ಮುನಿಗಳು

"ದಾಶರಥಿ ಚಿತ್ತೈಸು ನಮ್ಮಯ  
ದೇಶಕತಿಶಯ ನರೆದಲೆಗನೇ  
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು" ಎಂದು  
ಉತ್ತರಿಸುತ್ತಾರೆ. (ಪದ್ಯ ೩೪)  
ಇದನ್ನು ಕೇಳಿದ ವ್ರೀಹಿ ಕೋಪಗೊಂಡು  
"ನೆಲ್ಲು ನಾನಿರೆ, ಗೋಧಿ ಮೊದಲಾ  
ದೆಲ್ಲಾ ಧಾನ್ಯಗಳಿರಲು ಇದರಲಿ  
ಬಲ್ಲಿದನು ನರೆದಲೆಗನೆಂಬುದಿದಾವಮತ? ವೆಂದ" (ಪದ್ಯ ೩೫)

ಎಂದು ನುಡಿದು ಗೌತಮ ಮಹರ್ಷಿಗಳಿಗೆ ದೋಷರಹಿತರಾದ ನೀವು ಹೀಗೆ ಪಕ್ಷಪಾತದಿಂದ ನುಡಿಯಬಾರದಿತ್ತು ಎಂದು ಹೇಳಿದಲ್ಲದೆ ನಲೆದಲೆಗವನ್ನು ಕುರಿತು ಕೋಪದಿಂದ

"ಏನೆಲವೊ ನರೆದಲೆಗ ನೀನು ಸ  
ಮಾನನೇ ಎನಗಿಲ್ಲಿ ನಮ್ಮನು  
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ  
ಜಾನಕಿಪತಿ ಸನಿಹದಲಿ ಕುಲ  
ಹೀನ ನೀನ ಪ್ರತಿಷ್ಠೆ ಸುಡು ಮತಿ  
ಹೀನ ನೀನೆಂದನುತ ಖತಿಯಲಿ ಬೈದು ಭಂಗಿಸಿದ॥" (ಪದ್ಯ ೩೬)

ಎಂದು ತನ್ನ ಮಹಿಮೆಯನ್ನು ಹೇಳಿಕೊಳ್ಳಲಾರಂಭಿಸಿತು. ಭತ್ತವು ನುಡಿದ ಮೇಲಿನ ಅಹಂಕಾರದ, ಅವಮಾನಕರ ಮಾತುಗಳನ್ನು ಕೇಳಿದ ರಾಗಿಗೆ ಅಭಿಮಾನ ಭಂಗವಾಯಿತು. ಅದಕ್ಕೆ ಕೋಪದಿಂದ "ನುಡಿಗೆ ಹೇಸದ ನಿನ್ನಂತಹ ಭಂಡರಿಗೆ ಮಾರುತ್ತರ ಕೊಡುವರೇ ಯಾರಾದರೂ? ಕಡುಮೂರ್ಖ ನಿನ್ನೊಡನೆ ಮಾತೇಕೆ. ಸತ್ಯಹೀನನು ನೀನು, ಬಡವರನ್ನು ನೀನು ಕಣ್ಣೆತ್ತಿಯೂ ನೋಡುವುದಿಲ್ಲ. ಆದರೆ ಶ್ರೀಮಂತರನ್ನು ಮಾತ್ರ ಬೆಂಬತ್ತಿಯೇ ಇರುವ ಅಪೇಕ್ಷೆ ನಿನ್ನದು. ಹೆತ್ತ ಬಾಣಂತಿಯರಿಗೆ, ರೋಗಿಗಳಿಗೆ ನೀನು ವರ್ಜ್ಯವಲ್ಲವೇ? ಹೆಣದ ಬಾಯಿಗೆ ಹಾಕುವ ತುತ್ತು ನೀನಲ್ಲವೇ? ನಿನ್ನ ಜನ್ಮ ನಿರರ್ಥಕ" ಎಂದು ಮಾತು ಮುಂದುವರೆಸಿ

"ಮಳೆದಡೆದು ಬೆಳೆಯಡಗಿ ಕ್ಷಾಮದ  
ವಿಲಯಕ್ಕಾಲದೊಳನ್ನವಿಲ್ಲದೆ  
ಅಳಿವ ಪ್ರಾಣಿಗಳಾಧರಿಸಿ ಸಲಹುವೆನು ಜಗವರಿಯೆ" (ಪದ್ಯ ೪೭)

**ಎಂದು ರಾಗಿಯು ತನ್ನ ನೈಜ ವ್ಯಕ್ತಿತ್ವವನ್ನು ಹೇಳಿಕೊಂಡಿತು.**

ಮೇಲ್ಕಂಡಂತೆ ನಾನೇ ಶ್ರೇಷ್ಠ, ನಾನೇ ಶ್ರೇಷ್ಠ ಎಂದು ರಾಗಿ ಮತ್ತು ಭತ್ತಗಳ ನಡುವೆ ವಾದ–ವಿವಾದ ಆರಂಭವಾಗಿ ಪರಿಸ್ಥಿತಿ ವಿಪರೀತಕ್ಕೆ ಹೋಗುತ್ತದೆ. ಇದನ್ನು ಗಮನಿಸಿದ ರಾಮನು ಸರಿಯಾದ ಉತ್ತರ ಪಡೆಯಲು ರಾಗಿ ಮತ್ತು ಭತ್ತಗಳನ್ನು ಆರು ತಿಂಗಳುಗಳ ಕಾಲ ಸೆರೆಮನೆಯಲ್ಲಿ ಇಡುವಂತೆ ಆಜ್ಞೆ ಮಾಡುತ್ತಾನೆ. ಆರು ತಿಂಗಳು ಗಡುವು ಮುಗಿದ ನಂತರ ಇಬ್ಬರನ್ನು ಕರೆತಂದಾಗ ವ್ರೀಹಿ (ಭತ್ತ) ನಿಸ್ಸಾರವೂ, ಕಾಂತಿಹೀನವೂ ಆಗಿತ್ತು. ನರೆದಲೆಗ (ರಾಗಿ) ಸತ್ವವಾಗಿಯೂ, ವರ್ಣಸಹಿತವಾಗಿಯೂ ಇರುವುದನ್ನು ಕಂಡು ರಾಮ ಅದಕ್ಕೆ 'ರಾಘವ' ಎಂದು ತನ್ನ ನಾಮಾಂಕಿತವನ್ನು ಇಟ್ಟನು. ಅಂದಿನಿಂದ ನೆರೆದಲೆಗನಿಗೆ 'ರಾಗಿ' ಎಂಬ ಹೆಸರೇ ಶಾಶ್ವತವಾಗಿದೆ. ಈ ಸನ್ನಿವೇಶದಲ್ಲಿ ರಾಮನು ನೀಡಿದ ತೀರ್ಪು ಸಮಾಜದ ಎಲ್ಲಾ ವರ್ಣ–ವರ್ಗಗಳಿಗೂ ಸರ್ವಸಮಾನತೆಯ, ಸಮತೆಯ ತತ್ವವನ್ನು ಒತ್ತಿ ಹೇಳುತ್ತದೆ. ಈ ರೀತಿ ಧಾನ್ಯಗಳನ್ನು ಮೂರ್ತಿಕರಿಸಿ ಕನಕದಾಸರು ನವಿರಾದ ಹಾಸ್ಯದೊಂದಿಗೆ ಸಮಾಜದಲ್ಲಿನ ತಾರತಮ್ಯಗಳನ್ನು ತಮ್ಮ ವಿಡಂಬನಾ ಶೈಲಿಯ ಮೂಲಕ 'ರಾಗಿ'ಯನ್ನು 'ರಾಘವ'ನೆಂದು ವೈಭವೀಕರಿಸಿ ನಿರೂಪಿಸಿದ್ದಾರೆ. ಈ ಪ್ರಸಂಗದ ಮೂಲಕ ಸಮಾಜದ ಗಂಭೀರ ಸಮಸ್ಯೆಗಳನ್ನು ಎತ್ತಿಹಿಡಿಯುವ ಕನಕದಾಸರು ವರ್ಣಾಶ್ರಮದ ಅನ್ಯಾಯವನ್ನು ಪ್ರಶ್ನಿಸಿದ್ದಾರೆ ಮತ್ತು ಸಾಮಾನ್ಯ ಜನರ ಅಸಮಾನತೆಯನ್ನು ಅನಾವರಣಗೊಳಿಸಿದ್ದಾರೆ.

ಭಾರತೀಯ ಜಾತಿವ್ಯವಸ್ಥೆಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನ ಸ್ಥಾನಮಾನದ ಹಂಚಿಕೆಯಲ್ಲಿ ವಂಚಿತರಾದ ತಳಸಮುದಾಯಗಳ ನೋವುಗಳನ್ನು ಹೇಳುವಂತ ಕೃತಿಯು ರಾಮಧಾನ್ಯಚರಿತ್ರೆಯಾಗಿದೆ. ಸಸ್ಯ ಸಹಜವಾದ ಆಹಾರ ಧಾನ್ಯಗಳ

ಮೂಲಕ ಸಾಮಾಜಿಕ ಸಮಸ್ಯೆಗಳ ವಿವರವಾದ ಕುರಿತ ಚರ್ಚೆಯನ್ನು ಕಟ್ಟಿಕೊಡುವ ಈ ಕೃತಿಯಲ್ಲಿ ಕೆಳಸಮುದಾಯಗಳನ್ನು ಕಡೆಗಣಿಸುವ ಉತ್ತಮ ಕುಲವರ್ಗದವರ ವಿವರಗಳನ್ನು ಈ ಕೃತಿ ಅನಾವರಣಗೊಳಿಸಿದೆ. ರಾಮಧಾನ್ಯಚರಿತ್ರೆಯಲ್ಲಿ ರಾಗಿ ಮತ್ತು ಭತ್ತಗಳ ನಡುವಿನ ವಾಗ್ವಾದವು ಸಮಾಜದಲ್ಲಿರುವ ವರ್ಗ–ವರ್ಣ ಸಂಘರ್ಷಗಳ ನಡುವಿನ ಘರ್ಷಣೆಯಾಗಿ ಬಿಂಬಿತವಾಗಿದ್ದರೂ, ಕನಕದಾಸರು ಕೆಳವರ್ಗದಲ್ಲಿ ಜನಿಸಿದ ಒಂದೇ ಕಾರಣದಿಂದ ಸಾಮಾಜಿಕವಾಗಿ ಆಗುತ್ತಿದ್ದ ಅನ್ಯಾಯವನ್ನು ಸೂಚಿಸುತ್ತದೆಂದು, ವರ್ಗ ಹೋರಾಟವನ್ನು ಸಂಕೇತಿಸುತ್ತದೆಂದು ಹೇಳಬಹುದು.

'ರಾಮಧಾನ್ಯಚರಿತ್ರೆ' ಕಾವ್ಯವನ್ನು ಮುಖ್ಯವಾಗಿ ಅವಲೋಕಿಸಿದರೆ ಇದು ಜಾತಿ, ವರ್ಗ–ವರ್ಣ ಸಂಘರ್ಷ ನೆಲೆಯದ್ದಾಗಿದ್ದು ಮೇಲ್ವರ್ಗದ ಶ್ರೀಮಂತರು ಅಂತಃಸತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ, ಬಾಹ್ಯ ಆಡಂಬರದಿಂದ ಬದುಕುತ್ತಾರೆ ಎಂಬುದು ಕವಿಯ ನಿಲುವು. ಇದಲ್ಲದೆ ಜನಸಾಮಾನ್ಯರಿಗೆ ಸಮಾಜದಲ್ಲಿನ ಸಾಮಾಜಿಕ ಸಮಸ್ಯೆಗಳು, ಅಂಕುಡೊಂಕುಗಳು ಅರಿವಾಗಬೇಕೆಂಬ ಮಹತ್ವಪೂರ್ಣವಾದ ಆಶಯ ಕೃತಿಯಲ್ಲಿ ಅಡಕಗೊಂಡಿದೆ. ಕಾವ್ಯದ ಕೊನೆಯಲ್ಲಿ ವ್ರೀಹಿಗೆ ರಾಮನು ಹೇಳುವ

> "ದೇವರಿಗೆ ಪರಮಾನ್ನ ನೀ ಮನು
> ಜಾವಳಿಗೆ ಪಕ್ವಾನ್ನವೀತನು
> ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು" (ಪದ್ಯ ೧೪೯)

ಎಂದು ಹೇಳುವ ಮಾತುಗಳು ಸಾಮಾಜಿಕ ಹಿತದೃಷ್ಟಿಯಿಂದ ಸಮಸಮಾಜದ ರಚನೆಯ ಹಿನ್ನೆಲೆಯಲ್ಲಿ ಮೂಡಿಬಂದ ಅರ್ಥಗರ್ಭಿತ ಮಾತುಗಳಾಗಿವೆ. ಕನಕದಾಸರ ಮೇಲಿನ ಸಾಲುಗಳು ಮಾನವರೆಲ್ಲರೂ ಸಮಾನರು, ಅವರಲ್ಲಿ ಸೌಹಾರ್ದತೆಯ ಅರಿವಿರಬೇಕು ಎಂಬ ಕಾಲಾತೀತವಾದ ಸಂದೇಶವನ್ನು ನೀಡುತ್ತದೆ. ಸಮಾಜದಲ್ಲಿ ಮೇಲು–ಕೀಳು, ಬಡವ–ಬಲ್ಲಿದ ದಾಸ್ಯತ್ವ ತೊಲಗಿ ಎಲ್ಲರೂ ಒಂದಾಗಿ ಸಮಾನತೆ, ಸಮನ್ವಯತೆಯ ಅಡಿಯಲ್ಲಿ ಬಾಳಬೇಕೆಂಬ ಉತ್ಕಟ ಅಪೇಕ್ಷೆ ಕೃತಿಯಲ್ಲಿ ಬಹುಮುಖ್ಯವಾಗಿ ಅನಾವರಣಗೊಂಡಿದೆ.

ಮಾನವ ಮೂಲತಃ ಸಂಘ ಜೀವಿ. ಆತನು ಬದುಕಲು, ಜೀವನ ನಿರ್ವಹಿಸಲು ತಾನು ನಿರ್ಮಿಸಿಕೊಂಡ ಜನಸಮೂಹ, ಸಂಘ ಸಮುದಾಯಗಳೇ ಸಮಾಜ. ಈ ಸಮಾಜದಲ್ಲಿ ದಿನನಿತ್ಯದ ಆಗು–ಹೋಗುಗಳು ಅವನ ಅರಿವಿನ ಮೂಲಕ ನಡೆಯುತ್ತವೆ. ಅಂದರೆ ಸಮಕಾಲೀನ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರಣವೇ ಸಂಸ್ಕೃತಿ. ಈ ಸಾಂಸ್ಥಿಕ ವಲಯದಲ್ಲಿ ಸಮಾನತೆಗೆ, ಸಾಮಾಜಿಕ ಅರಿವಿಗೆ ಹೆಚ್ಚು ಪ್ರಾಧಾನ್ಯತೆ ದೊರಕಬೇಕು. ಆದ್ದರಿಂದಲೇ ಕನಕದಾಸರು ಸಮಕಾಲೀನ ಸಮಾಜಕ್ಕೆ ಬೇಕಾಗುವ ಸ್ವಾತಂತ್ರ್ಯ, ಸಮಾನತೆ, ಸಮತೆ, ನೈತಿಕತೆ, ಸ್ವಾಭಿಮಾನ ಮುಂತಾದ ನೈತಿಕ ಮೌಲ್ಯಗಳನ್ನು ತಮ್ಮ ರಾಮಧಾನ್ಯಚರಿತ್ರೆ ಕೃತಿಯ ಮುಖೇನ ಅಭಿವ್ಯಕ್ತಿಸಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಶ್ರಮಿಸಿದ್ದಾರೆ. ತಿನ್ನುವ ಆಹಾರದಲ್ಲಿ ಯಾವುದು ಶ್ರೇಷ್ಠ ಮತ್ತು ಕನಿಷ್ಠ ಎನ್ನುವುದಕ್ಕಿಂತ ಮಾನವನ ಹಸಿವು ಮತ್ತು ಅವನ ಕಷ್ಟ ಸಂಕಟಗಳಿಗೆ ಒದಗುವುದೇ ಶ್ರೇಷ್ಠವೆಂಬ ಪರಮಸತ್ಯ ಮತ್ತು ಸಮಾನತೆಯ ತತ್ವ ಪ್ರತಿಪಾದನೆ ಅಸಾಧಾರಣವೆಂಬುದನ್ನು ಕನಕದಾಸರು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಹೀಗಾಗಿ 'ರಾಮಧಾನ್ಯಚರಿತ್ರೆ' ಕೃತಿಯು ಸಮಾಜದಲ್ಲಿನ ಸಾಮಾಜಿಕ ಸ್ಥಿತಿಗತಿಗಳನ್ನು ಪ್ರಶ್ನಿಸುವ ಮಹತ್ವದ ಕೃತಿಯಾಗಿದೆ. ಆದ್ದರಿಂದ ಈ ಕೃತಿಯಲ್ಲಿ ಸಾಮಾಜಿಕ ತತ್ವ, ಮಾನವೀಯತೆ, ಸಮತೆ ಮತ್ತು ಸಮಾನತೆಯ ಮೌಲ್ಯಗಳು ಸ್ಪಷ್ಟವಾಗಿ ಪ್ರಧಾನ ನೆಲೆಯಲ್ಲಿ ಅನಾವರಣಗೊಂಡಿದೆ.

**ಪರಾಮರ್ಶನ ಕೃತಿಗಳು**


1. ರಾಮಧಾನ್ಯಚರಿತ್ರೆ: ೧೯೭೬: (ಸಂ): ದೇ.ಜವರೇಗೌಡ: ಡಿ.ವಿ.ಕೆ.: ಮೂರ್ತಿ ಪ್ರಕಾಶನ, ಮೈಸೂರು.
2. ಕನಕಾವಲೋಕನ: ೨೦೧೭: ದೇ.ಜವರೇಗೌಡ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
3. ಕನಕದಾಸರು ಮತ್ತು ಆಧುನಿಕ ಚಿಂತನೆಗಳು: ಮುಖಾಮುಖಿ: ೨೦೧೬: ಬಿ.ವಿ. ಶಿರೂರ: ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
4. ರಾಮಧಾನ್ಯಚರಿತ್ರೆ: ಸಂಘರ್ಷದ ನೆಲೆ: ೨೦೧೬: ಸರೋಜಿನಿ ಸಿ. ಹಿರೇಮಠ: ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
5. ಕನಕದಾಸರು: ೨೦೧೬: ಕಾ.ತ. ಚಿಕ್ಕಣ್ಣ: ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ.